**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 17 ಸೇಅನೇ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 24.05.2022.

**ಅಧಿಸೂಚನೆ**

ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14) 8ನೇ ಪ್ರಕರಣದೊಂದಿಗೆ ಓದಲಾದಂತೆ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವಂಥ ಕರ್ನಾಟಕ ರಾಜ್ಯ ನಾಗರಿಕ ಸೇವಾ (ದೌರ್ಜನ್ಯದಿಂದ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) ನಿಯಮಗಳು 1999 ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಸಲುವಾಗಿ ಈ ಕೆಳಗಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಇದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ, ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಹದಿನೈದು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಸದರಿ ಕರಡಿಗೆ ಸಂಬಂಧಪಟ್ಟಂತೆ ಮೇಲೆ ಗೊತ್ತುಪಡಿಸಿದ ಅವಧಿ ಕೊನೆಗೊಳ್ಳುವ ಮುಂಚೆ ಯಾರೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು-560001 ಇವರಿಗೆ ಸಲ್ಲಿಸತಕ್ಕದ್ದು.

**ಕರಡು ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ ಕರ್ನಾಟಕ ರಾಜ್ಯ ನಾಗರಿಕ ಸೇವಾ (ದೌರ್ಜನ್ಯದಿಂದ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು 2022 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

.....2.

**2. ನಿಯಮ 2 ರ ತಿದ್ದುಪಡಿ.-** ಕರ್ನಾಟಕ ರಾಜ್ಯ ನಾಗರಿಕ ಸೇವಾ (ದೌರ್ಜನ್ಯದಿಂದ ಮೃತಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ ವ್ಯಕ್ತಿಗಳ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) ನಿಯಮಗಳು 1999ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) ನಿಯಮ 2 ರ, ಉಪ ನಿಯಮ (1)ರಲ್ಲಿ, (ಬಿ) ಖಂಡದ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(ಬಿ) ಈ ನಿಯಮಗಳ ಉದ್ದೇಶಕ್ಕಾಗಿ "ಕುಟುಂಬ" ಎಂದರೆ.-

(i) ಮೃತ ಪುರುಷ ವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ, ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ವಿಧವಾ ಪತ್ನಿ, ಮಗ ಮತ್ತು ಮಗಳು (ಅವಿವಾಹಿತೆ/ವಿವಾಹಿತೆ/ವಿಚ್ಛೇದಿತೆ/ವಿಧವೆ);;

(ii) ಮೃತ ಮಹಿಳಾ ವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಮಗ, ಮಗಳು ((ಅವಿವಾಹಿತೆ/ವಿವಾಹಿತೆ/ವಿಚ್ಛೇದಿತೆ/ವಿಧವೆ) ಮತ್ತು ವಿಧುರ ಪತಿ;

(iii) ಮೃತ ಪುರುಷ ಅವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ, ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ಸಹೋದರ ಅಥವಾ ಸಹೋದರಿ;

(iv) ಮೃತ ಮಹಿಳಾ ಅವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಸಹೋದರ ಅಥವಾ ಸಹೋದರಿ ; ಮತ್ತು

(v) ಮೃತ ವಿವಾಹಿತ ವ್ಯಕ್ತಿಯ ಸಂಗಾತಿ ಈಗಾಗಲೇ ನಿಧನರಾಗಿದ್ದು ಮತ್ತು ಆತ/ಆಕೆಯ ಅಪ್ರಾಪ್ತ ವಯಸ್ಕ ಮಕ್ಕಳಿದ್ದಾಗ ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಅವರೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರು;

**3. ನಿಯಮ 3 ರ ತಿದ್ದುಪಡಿ .-** ಸದರಿ ನಿಯಮಗಳ ನಿಯಮ 3 ರ ಉಪ ನಿಯಮ (2)ರಲ್ಲಿ,-

(i) ಖಂಡ (ಎ)ರಲ್ಲಿ "ಮತ್ತು ಯಾವುದೇ ಇತರ ಆದಾಯವಿಲ್ಲದ" ಎಂಬ ಪದಗಳನ್ನು ಕೈಬಿಡತಕ್ಕದ್ದು.

(ii) ಖಂಡ (ಬಿ)ರಲ್ಲಿ, "ಆದಾಯ" ಎಂಬ ಪದವನ್ನು ಕೈಬಿಡತಕ್ಕದ್ದು.

(iii) ಖಂಡ (ಸಿ)ರ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(ಸಿ) ಅರ್ಜಿದಾರನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 6 ರ ಉಪ ನಿಯಮ (2) ರೊಂದಿಗೆ ಓದಿಕೊಂಡಂತೆ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿತ ನೇಮಕಾತಿ ನಿಯಮಗಳಲ್ಲಿ ಆ ಹುದ್ದೆಗೆ ನಿರ್ದಿಷ್ಟಪಡಿಸಿದ ವಯೋಮಿತಿಯೊಳಗೆ ಇರತಕ್ಕದ್ದು ಮತ್ತು ಎಲ್ಲಿ ಅದನ್ನು ನಿರ್ದಿಷ್ಟಪಡಿಸಿರುವುದಿಲ್ಲವೋ, ಅಂತಹ ಅಭ್ಯರ್ಥಿಯು ಮೇಲ್ಕಂಡ ನಿಯಮ 6ರಲ್ಲಿ ನಿರ್ದಿಷ್ಟಪಡಿಸಿರುವ ವಯೋಮಿತಿಯೊಳಗಿರತಕ್ಕದ್ದು.

ಪರಂತು, ಈ ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಮೇಲ್ಕಂಡ ನಿಯಮಗಳ ಅನ್ವಯ ನೇಮಕಾತಿಗೆ ಮೃತ ವ್ಯಕ್ತಿಯ ವಿಧವಾ ಪತ್ನಿ ಅಥವಾ ವಿಧುರ ಪತಿಯ ಗರಿಷ್ಠ ವಯೋಮಿತಿಯು ಅರ್ಜಿ ಸಲ್ಲಿಸುವ ದಿನಾಂಕದಂದು ಐವತ್ತೈದು ವರ್ಷಗಳಾಗಿರತಕ್ಕದ್ದು.

(iv) ಖಂಡ (ಡಿ)ರ ನಂತರ, ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

" ಪರಂತು, ಶೈಕ್ಷಣಿಕ ವಿದ್ಯಾರ್ಹತೆಗೆ ಸಂಬಂಧಿಸಿದಂತೆ, ಈ ಖಂಡದಲ್ಲಿನ ಅಥವಾ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 5 ರ ಉಪ ನಿಯಮ (5) ರಲ್ಲಿನ ಯಾವುದೇ ಅಂಶವು, ಈ ನಿಯಮಗಳನ್ವಯ ಗ್ರೂಪ್-ಡಿ ವೃಂದದ ಯಾವುದೇ ಹುದ್ದೆಯ ನೇಮಕಾತಿಗೆ ಅನ್ವಯವಾಗತಕ್ಕದ್ದಲ್ಲ."

(v) ಖಂಡ (ಎಫ್)ನ್ನು ಕೈಬಿಡತಕ್ಕದ್ದು; ಮತ್ತು

(vi) ಉಪ ನಿಯಮ (3)ರ ಬದಲಾಗಿ ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**"(3)** ಈ ನಿಯಮಗಳಡಿ ಮಾಡುವ ನೇಮಕಾತಿಯು ಆದ್ಯತಾನುಕ್ರಮದಲ್ಲಿ ಮಾಡತಕ್ಕದ್ದು ಮತ್ತು ಮೃತ ವ್ಯಕ್ತಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸಿಸುತ್ತಿದ್ದ ಕುಟುಂಬದ ಸದಸ್ಯರಿಗೆ ಈ ಕೆಳಗೆ ನಿರ್ದಿಷ್ಟಪಡಿಸಿರುವಂತೆ ನಿರ್ಬಂಧಿಸತಕ್ಕದ್ದು,

(ಎ) ಮೃತ ಪುರುಷ ವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ,

(i) ವಿಧವಾ ಪತ್ನಿ; ಅಥವಾ

(ii) ಆಕೆಯು ನೇಮಕಾತಿಗೆ ಅರ್ಹಳಿಲ್ಲದಿದ್ದಲ್ಲಿ ಅಥವಾ ಯಾವುದೇ ಸಮುಚಿತ ಕಾರಣಕ್ಕಾಗಿ ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಆಕೆಯು ಆಯ್ಕೆ ಮಾಡಿದ ಆತನ ಮಗ ಅಥವಾ ಮಗಳು.

**ಟಿಪ್ಪಣಿ:** ಮೃತ ಪುರುಷ ವಿವಾಹಿತ ವ್ಯಕ್ತಿಯ ಸಂಗಾತಿಯು, ಉಪ ಖಂಡ (ii)ರನ್ವಯ ಮಗ ಅಥವಾ ಮಗಳ ಆಯ್ಕೆಯನ್ನು ಮಾಡುವ ಮೊದಲೇ ಮೃತಪಟ್ಟ ಸಂದರ್ಭದಲ್ಲಿ, ಆಗ ಈ ನಿಯಮಗಳಡಿ ನೇಮಕಾತಿಯನ್ನು ಇಚ್ಛಿಸುವ ಮತ್ತು ಅರ್ಹರಾದ ಹಿರಿಯ ಮಗ/ಮಗಳಿಗೆ ಆದ್ಯತೆ ನೀಡತಕ್ಕದ್ದು.

...4.

(ಬಿ) ಮೃತ ಪುರುಷ ಅವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ, ಆತನ ತಂದೆ ಅಥವಾ ತಾಯಿಯು ಒಮ್ಮತವಾಗಿ ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆತನ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ;

**ಟಿಪ್ಪಣಿ:** ಮೃತ ಪುರುಷ ಅವಿವಾಹಿತ ವ್ಯಕ್ತಿಯ ತಾಯಿಯು ಅಥವಾ ತಾಯಿ-ತಂದೆ ಇಬ್ಬರೂ, ಈ ನಿಯಮಗಳಡಿ ನೇಮಕಾತಿಗಾಗಿ ಮಗ ಅಥವಾ ಮಗಳನ್ನು ಈ ಖಂಡದನ್ವಯ ಆಯ್ಕೆ ಮಾಡುವ ಮೊದಲೇ ಮೃತಪಟ್ಟ ಸಂದರ್ಭದಲ್ಲಿ, ಆಗ ಈ ನಿಯಮಗಳಡಿ ನೇಮಕಾತಿಯನ್ನು ಇಚ್ಛಿಸುವ ಮತ್ತು ಅರ್ಹರಾದ ಅವರ ಹಿರಿಯ ಮಗ/ಮಗಳಿಗೆ ಆದ್ಯತೆ ನೀಡತಕ್ಕದ್ದು.

(ಸಿ) ಮೃತ ಮಹಿಳಾ ವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ,

(i) ಮೃತ ವಿವಾಹಿತ ಮಹಿಳಾ ವ್ಯಕ್ತಿಯ ವಿಧುರ ಪತಿಯು ಆಯ್ಕೆ ಮಾಡಿದ ಮಗ ಅಥವಾ ಮಗಳು; ಅಥವಾ

(ii) ಮಗ ಅಥವಾ ಮಗಳು ನೇಮಕಾತಿಗೆ ಅರ್ಹರಿಲ್ಲದಿದ್ದಲ್ಲಿ ಅಥವಾ ಯಾವುದೇ ಸಮುಚಿತ ಕಾರಣಕ್ಕಾಗಿ ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಆಕೆಯ ವಿಧುರ ಪತಿ;

**ಟಿಪ್ಪಣಿ:** ಮೃತ ಮಹಿಳಾ ವಿವಾಹಿತ ವ್ಯಕ್ತಿಯ ಸಂಗಾತಿಯು, ಉಪ ಖಂಡ (i)ರನ್ವಯ ಮಗ ಅಥವಾ ಮಗಳ ಆಯ್ಕೆಯನ್ನು ಮಾಡುವ ಮೊದಲೇ ಮೃತಪಟ್ಟ ಸಂದರ್ಭದಲ್ಲಿ, ಆಗ ಈ ನಿಯಮಗಳಡಿ ನೇಮಕಾತಿಯನ್ನು ಇಚ್ಛಿಸುವ ಮತ್ತು ಅರ್ಹರಾದ ಹಿರಿಯ ಮಗ/ಮಗಳಿಗೆ ಆದ್ಯತೆ ನೀಡತಕ್ಕದ್ದು.

(ಡಿ) ಮೃತ ಮಹಿಳಾ ಅವಿವಾಹಿತ ವ್ಯಕ್ತಿಯ ಸಂದರ್ಭದಲ್ಲಿ, ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ತಂದೆ ಅಥವಾ ತಾಯಿಯು ಒಮ್ಮತವಾಗಿ ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆಕೆಯ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ;

**ಟಿಪ್ಪಣಿ:** ಮೃತ ಮಹಿಳಾ ಅವಿವಾಹಿತ ವ್ಯಕ್ತಿಯ ತಾಯಿಯು ಅಥವಾ ತಾಯಿ-ತಂದೆ ಇಬ್ಬರೂ ಈ ನಿಯಮಗಳಡಿ ನೇಮಕಾತಿಗಾಗಿ ಮಗ ಅಥವಾ ಮಗಳನ್ನು ಈ ಖಂಡದನ್ವಯ ಆಯ್ಕೆ ಮಾಡುವ ಮೊದಲೇ ಮೃತಪಟ್ಟ ಸಂದರ್ಭದಲ್ಲಿ, ಆಗ ಈ ನಿಯಮಗಳಡಿ ನೇಮಕಾತಿಯನ್ನು ಇಚ್ಛಿಸುವ ಮತ್ತು ಅರ್ಹರಾದ ಅವರ ಹಿರಿಯ ಮಗ/ಮಗಳಿಗೆ ಆದ್ಯತೆ ನೀಡತಕ್ಕದ್ದು.

...5.

(ಇ) ಮೃತ ವಿವಾಹಿತ ವ್ಯಕ್ತಿಯ ಸಂಗಾತಿ ಈಗಾಗಲೇ ಮೃತಪಟ್ಟಿದ್ದು ಮತ್ತು ಅವರಿಗೆ ಅಪ್ರಾಪ್ತ ವಯಸ್ಕ ಮಕ್ಕಳಿದ್ದ ಸಂದರ್ಭದಲ್ಲಿ, ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಆ ಮಕ್ಕಳೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರು.

**4. ನಿಯಮ 4ರ ತಿದ್ದುಪಡಿ .-** ಸದರಿ ನಿಯಮಗಳ ನಿಯಮ 4 ರ ಉಪ ನಿಯಮ (1)ರಲ್ಲಿ,-

(i) "ಒಂದು ವರ್ಷ" ಎಂದ ಪದಗಳು ಬರುವ ಎರಡು ಕಡೆಗಳಲ್ಲಿ "ಎರಡು ವರ್ಷಗಳು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ii) ಮೊದಲನೇ ಪರಂತುಕದ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"ಪರಂತು, ಅರ್ಜಿದಾರರು ಅಪ್ರಾಪ್ತ ವಯಸ್ಕರಾದ ಸಂದರ್ಭದಲ್ಲಿ, ವ್ಯಕ್ತಿ ಮರಣ ಹೊಂದಿದ ದಿನಾಂಕದಿಂದ ಮೂರು ವರ್ಷದ ಒಳಗೆ ಹದಿನೆಂಟು ವರ್ಷಗಳನ್ನು ಪೂರೈಸಿರತಕ್ಕದ್ದು ಮತ್ತು ತದನಂತರದ ಎರಡು ವರ್ಷಗಳೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು."

(iii) ಎರಡನೇ ಪರಂತುಕವನ್ನು ಕೈಬಿಡತಕ್ಕದ್ದು.

**5. ನಮೂನೆ-ಡಿ ರ ತಿದ್ದುಪಡಿ:-** ಸದರಿ ನಿಯಮಗಳ ನಮೂನೆ-ಡಿ ರಲ್ಲಿ, ಕಾಲಂ 7 ಮತ್ತು ಅದರಡಿಯಲ್ಲಿನ ನಮೂದುಗಳನ್ನು ಕೈಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ತೇಜಾವತಿ.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-ವಿಶೇಷ ಕೋಶ).

**ಗೆ,**

ಸಂಕಲನಕಾರರು, ಕರ್ನಾಟಕ ಇ-ರಾಜ್ಯಪತ್ರ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)/(ಇ&ಆರ್ಎಸ್-ಎ)/(ಎ&ಇ).
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು.

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ಅಭಿವೃದ್ಧಿ ಆಯುಕ್ತರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು/ಕಾರ್ಯದರ್ಶಿಯವರು.
7. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
8. ಎಲ್ಲಾ ಇಲಾಖಾ ಮುಖ್ಯಸ್ಥರು.
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಎಲ್ಲಾ ಜಿಲ್ಲಾಧಿಕಾರಿಗಳು/ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
11. *ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು.
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.
15. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
16. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
17. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನಂ.10, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ- 110011.
18. ಎಲ್ಲಾ ಸಚಿವರ/ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
19. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
20. ಸಚಿವಾಲಯದ ಎಲ್ಲಾ ಶಾಖೆಗಳು
21. ಸಚಿವ ಸಂಪುಟ ಶಾಖೆ (ವಿಷಯ ಸಂಖ್ಯೆ: ಸಿ: 237/2022).
22. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು.
23. ವಾರದ ರಾಜ್ಯಪತ್ರ.
24. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

**(*ಪ್ರತ್ಯೇಕ ಮುಖಪತ್ರದೊಂದಿಗೆ)**